ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಬಾಗೇಪಲ್ಲಿ

C.C. 885/2021 CW: 1 P.W. 1

ಸಾಕ್ಷಿದಾರರ ಹೆಸರು ಃ ಸಾವಿತ್ರಮ್ಮಾ
ತಂದೆ/ಗಂಡನ ಹೆಸರು ಃ ಮಾರಪ್ಪಾರೆಡ್ಡಿ
ವಯಸ್ಸು ಃ 60 ವರ್ಷ
ವೃತ್ತಿ ಃ ಗೃಹಿಣಿ
ವಾಸಸ್ಥಳ ಃ ಶೇರಖಾನ್ ಕೋಟೆ

**ಪ್ರಮಾಣೀಕರಿಸಲಾದ ದಿಃ 14.12.2022**

**ಮುಖ್ಯ ವಿಚಾರಣೆ ಃಃ ಸಸಅ ರವರಿಂದಃ**

ಮೃತ ಶಾಂತಮ್ಮಾ ನನ್ನ ಮಗಳು. ಒಂದು ವರ್ಷದ ಹಿಂದೆ ಇದ್ದಿಲವಾರಪಲ್ಲಿ ಕೃಷ್ಣಪ್ಪಾ ರವರ ಹೊಲದಲ್ಲಿ ಕೊತ್ತಂಬರಿ ಸೊಪ್ಪು ಕೀಳಲು ಬೆಳಿಗ್ಗೆ 7.30 ಕ್ಕೆ ಹೊಗಿದ್ದಳು. ಶಾಂತಮ್ಮಾರವರ ಜೊತೆಗೆ ಚಾಸಾ 2,3 ಮತ್ತು 4 ಹೋಗಿದ್ದರು. ಕೆಲಸ ಮುಗಿಸಿಕೊಂಡು ವಾಪಸ್ಸು ಇದ್ದಿಲವಾರಿಪಲ್ಲಿಯಿಂದ ಶೇರಖಾನಕೋಟೆಗೆ ಟೆಂಪೋದಲ್ಲಿ ಬರುತ್ತಿರುವಾಗ ಶೇರಖಾನಕೋಟೆ ಬಳಿ ಆರೋಪಿಯು ಸದರಿ ಟೆಂಪೋವನ್ನು ಅಡ್ಡಾ ದಿಡ್ಡ ಓಎಕೊಂಡು ಬಂದು ಪಲ್ಟಿ ಕೆಡವಿರುತ್ತಾನೆ.

2. ಶಾಂತಮ್ಮಾ ರವರಿಗೆ ಕಿವಿಯಲ್ಲಿ ರಕ್ತ ಬಂದಿರುತ್ತದೆ. ಚಾಸಾ 2,3 ಮತ್ತು 4 ರವರಿಗೆ ಗಾಯಗಳಾಗಿರುತ್ತವೆ. ಘಟನೆಯ ಬಗ್ಗೆ ಚಾಸಾ 11 ಮಂಜುನಾಥರವರು ನನಗೆ ತಿಳಿಸಿರುತ್ತಾರೆ. ನಂತರ ನಾನು ಸ್ಥಳಕ್ಕೆ ಹೋಗಿರುತ್ತೇನೆ. ನಂತರ ಗಾಯಾಳುಗಳನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇವೆ. ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ನನ್ನ ಮಗಳು ಮೃತ ಪಟ್ಟಿದ್ದನ್ನು ದೃಡ ಪಡಿಸಿರುತ್ತಾರೆ. ನಂತರ ನಾನು ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ದೂರನ್ನು ನಿಪಿ 1 ಎಂದು , ಸಾಕ್ಷಿಯ ಸಹಿಯನ್ನು ನಿಪಿ 1(ಸಿ )ಎಂದು ಗುರುತಿಸಲಾಯಿತು. ದೂರು ನೀಡಿದ ನಂತರ ಪೋಲೀಸರು ಸ್ಥಳಕ್ಕೆ ಬಂದು ನಾನು ಸ್ಥಳ ತೋರಿಸಿದ ಮೇರೆಗೆ ಪಂಚನಾಮೆ

ಯನ್ನು ತಯಾರಿಸಿ ನನ್ನ ಸಹಿ ಪಡೆದಿರುತ್ತಾರೆ. ಪಂಚನಾಮೆಯನ್ನು ನಿಪಿ 2 ಎಂದು ಸಾಕ್ಷಿಯ ಸಹಿಯನ್ನು 2 (ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)

ದಿನಾಂಕ 18.05.2021 ರಂದು ಮಧ್ಯಾಹ್ನ 2 ಗಂಟೆಗೆ ನನ್ನ ಮಗಳು ಕೆಲಸ ಮುಗಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ಟೆಂಪೋ ನಂ. ಕೆ ಎ 11 ಬಿ 5577 ಎಂದರೆ ಸರಿ. ಟೆಂಪೋವನ್ನು ಅಜಾಗರೂಕತೆಯಿಂದ ಒಡಿಸಿಕೊಂಡು ಬಂದು ರಸ್ತೆ ದಾಟುವಾಗ ಡಿಕ್ಕಿ ಪಡಿಸಿರುತ್ತಾರೆ ಎಂದರೆ ಸರಿ. ಮಧ್ಯಾಹ್ನ 3 ರಿಂದ 4.30 ರವರೆಗೆ ಪೋಲೀಸರು ಪಂಚನಾಮೆ ತಯಾರಿಸಿರುತ್ತಾರೆ ಎಂರೆ ಸರಿ. ಪಂಚನಾಮೆಗೆ ಚಾಸಾ 6 ಮತ್ತು 7 ಸಹಿ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆ ತಯಾರಿಸಿ ಪೋಲೀಸರು ಟೆಂಪೋ ಜಪ್ತು ಪಡಿಸಿಕೊಂಡಿದ್ದಾರೆ ಎಂದರೆ ಸರಿ. ಅಪಘಾತ ಪಡಿಸಿದ ಟೆಂಪೋದ ಪೋಟೋವನ್ನು ಸಾಕ್ಷಿಗೆ ತೋರಿಸಲಾಗಿ ಅವುಗಳನ್ನು ಸಾಕ್ಷಿ ಗುರುತಿಸಸಿದ್ದು ಅವುಗಳನ್ನು ನಿಪಿ 3 ಮತ್ತು 4 ಎಂದು ಗರುತಿಸಲಾಯಿತು. ಅಪಘಾತವು ಆರೋಪಿಯ ತಪ್ಪಿನಿಂದ ಆಗಿದೆ ಎಂದರೆ ಸರಿ.

**ಪಾಟೀ ಸವಾಲು: ಆರೋಪಿ ಪರ ವಕೀಲರು ಸಮಯಾವಕಾಶ ಕೋರಿದ್ದು ಸಕಾರಣ ಇಲ್ಲದೆ ಇದ್ದುದರಿಂದ ತಿರಸ್ಕರಿಸಲಾಯಿತು ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಗಣಕೀಕರಣಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಜೆಎಂಎಫ್‌ಸಿ ., ಬಾಗೇಪಲ್ಲಿ